ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 19/07/2019

Quicks

# ಚಿತ್ರಣವನ್ನು ಬದಲಿಸಿದ Point of order



ವಿಧಾನಸಭೆಯಲ್ಲಿ ಪ್ರಖರವಾಗಿ ಮಾತನಾಡಿದ ಬಿಜೆಪಿಯ ಜೆ.ಸಿ.ಮಾಧುಸ್ವಾಮಿ.

**ಬೆಂಗಳೂರು:** ಮೈತ್ರಿ ಸರಕಾರ ಉಳಿಸಿಕೊಳ್ಳುವ ಕಾರ್ಯತಂತ್ರದೊಂದಿಗೆ ದೋಸ್ತಿ ನಾಯಕರು, ಸರಕಾರಕ್ಕೆ ಇತಿಶ್ರೀ ಹಾಕಲು ಪ್ರತಿಪಕ್ಷ ಬಿಜೆಪಿ ಎರಡೂ ಪಾಳೆಯ ಸಾಕಷ್ಟು ತಾಲೀಮು ಮಾಡಿಕೊಂಡೇ ಗುರುವಾರ ಸದನಕ್ಕೆ ಬಂದಿದ್ದವು. ಎರಡೂ ಕಡೆಯಿಂದ ಸಾಕಷ್ಟು ಪೂರ್ವತಯಾರಿ ನಡೆದಿತ್ತು ಎಂಬುದು ಇಡೀ ದಿನದ ಕಲಾಪದಲ್ಲಿ ಪ್ರತಿಬಿಂಬಿತವಾಯಿತು.

ಸಿಎಂ ವಿಶ್ವಾಸಮತ ಪ್ರಸ್ತಾವನೆ ಮಂಡಿಸಿ, ಮಾತು ಆರಂಭಿಸುತ್ತಿದ್ದಂತೆ ಸುಮಾರು 20 ನಿಮಿಷಗಳ ಕಾಲ ಸದನದಲ್ಲಿ ಗಪ್‌ಚುಪ್ ಸ್ಥಿತಿ ಇತ್ತು. ಗದ್ದಲ ಸೃಷ್ಟಿಯಾದರೆ 'ಮುಹೂರ್ತ' ತಡವಾಗುತ್ತೆ ಎಂದು ಪ್ರತಿಪಕ್ಷ ಬಿಜೆಪಿ ಸದಸ್ಯರು ಯಾವುದೇ ತಕರಾರು ತೆಗೆಯದೆ ಸಂಪೂರ್ಣ ಶಾಂತಚಿತ್ತರಾಗಿದ್ದರು. ಮಧ್ಯಪ್ರವೇಶಿಸಲು ಆರಗ ಜ್ಞಾನೇಂದ್ರ ಪ್ರಯತ್ನ ನಡೆಸಿದಾಗ ಬಿ.ಶ್ರೀರಾಮುಲು ಮತ್ತಿತರರು ತಡೆದು ಬುದ್ಧಿವಾದ ಹೇಳಿದರು. ಆಡಳಿತ ಪಕ್ಷದ ಕಡೆಯಿಂದ ಏನೇ ಪ್ರಚೋದನೆ ಬಂದರೂ, ಸಿಎಂ ಯಾವುದೇ ಟೀಕೆ ಮಾಡಿದರೂ ತುಟಿಬಿಚ್ಚಬಾರದು ಎಂಬ ಸಂಯಮದ ಧೋರಣೆ ಬಿಜೆಪಿ ಪಾಳಯದಲ್ಲಿತ್ತು. ಸದನದಲ್ಲಿ ಸದಾ ಗದ್ದಲ ಎಬ್ಬಿಸುತ್ತಿದ್ದ ಬಿಜೆಪಿಯ ರೇಣುಕಾಚಾರ್ಯ ಮತ್ತಿತರರು ಬಾಯಿ ಬಿಡಲಿಲ್ಲ.

**ರಂಗೇರಿದ ಸದನ:** ಪ್ರತಿಪಕ್ಷ ಕಡೆಯಿಂದ ಮಾಧುಸ್ವಾಮಿ, ಬಸವರಾಜ ಬೊಮ್ಮಾಯಿ, ಕೆ.ಜಿ.ಬೋಪಯ್ಯ ಅವರು ಮಾತ್ರ ಸಾಂದರ್ಭಿಕವಾಗಿ ಮಾತನಾಡಲು ತೀರ್ಮಾನವಾಗಿತ್ತು. ಅಂತೆಯೇ, ಕಲಾಪವೂ ಸರಿದಾರಿಯಲ್ಲಿ ಸಾಗಿತ್ತು. ಆದರೆ, 'ಕ್ರಿಯಾಲೋಪ'ದ ಮೂಲಕ ಮಾಜಿ ಸಿಎಂ ಸಿದ್ದರಾಮಯ್ಯ ಮಧ್ಯಪ್ರವೇಶದ ಬಳಿಕ ಎಲ್ಲವೂ ಉಲ್ಟಾ ಆಯಿತು. ಆಡಳಿತ ಪಕ್ಷದ ಕಡೆಯಲ್ಲೂ ಸಿಎಂ ಮಾತಿನ ಮಧ್ಯೆ ಸಿದ್ದರಾಮಯ್ಯ, ಬಳಿಕ ಎಚ್.ಕೆ.ಪಾಟೀಲ್, ಕೃಷ್ಣಬೈರೇಗೌಡ ಮಾತಿನ ಕಾರ್ಯತಂತ್ರವೂ ಸಿದ್ಧವಾಗಿತ್ತು. ಆದರ, ಗದ್ದಲ ಸೃಷ್ಟಿಗೆ ಜೆಡಿಎಸ್-ಕಾಂಗ್ರೆಸ್ ಕಡೆಯಿಂದ ಯಾವುದೇ ನಿರ್ಬಂಧ ಇರಲಿಲ್ಲ ಎಂಬುದು ಸದನದಲ್ಲಿ ವ್ಯಕ್ತವಾಯಿತು.

ವಿಶ್ವಾಸಮತ ಪ್ರಸ್ತಾವನೆಯನ್ನು ವಿಳಂಬ ಮಾಡುವ ಪ್ರಯತ್ನ ನಡೆಯುತ್ತಿದೆ ಎಂಬ ಅನುಮಾನ ಗಟ್ಟಿಯಾಗುತ್ತಿದ್ದಂತೆ ಪ್ರತಿಪಕ್ಷ ಪಾಳೆಯ ನೇರವಾಗಿ ಸ್ಪೀಕರ್ ವಿರುದ್ಧವೇ ತಿರುಗಿಬಿತ್ತು. ದಿನದ ಅಂತ್ಯದೊಳಗೇ ವಿಶ್ವಾಸಮತ ಪ್ರಕ್ರಿಯೆ ಮುಗಿಸುವಂತೆ ರಾಜ್ಯಪಾಲರ ಸಂದೇಶ ಬಂದ ನಂತರವಂತೂ ಪ್ರತಿಪಕ್ಷ ಪಾಳಯದಲ್ಲಿ ಹೋರಾಟದ ಕಿಚ್ಚು ಹೆಚ್ಚಿತು. ಸಂಯಮದ ನಡೆ [illegible] ಸರಕಾರದ ವಿರುದ್ಧ ಮುಗಿಬಿದ್ದರು.